## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 14 ಜಿಲ್ಲೆಗಳಲ್ಲಿರುವ "ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರಗಳಿಗೆ" ನೀಡುವ ಸಹಾಯಧನದ ಸೌಲಭ್ಯವನ್ನು 16 ಜಿಲ್ಲೆಗಳಿಗೆ ವಿಸ್ತರಿಸುವುದು ಮತ್ತು ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು ರೂ. 28.00 ಲಕ್ಷದಿಂದ ರೂ. 36.00 ಲಕ್ಷಗಳಿಗೆ ದರ ಪರಿಷ್ಕರಣೆ ಮಾಡುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಏಕಕಡತ ಸಂಖ್ಯೆ: ಇಸಿ/ಹೊ.ಯೋ/04/ಜಿ.ಪು.ಕೇಂ/2016-17.

ಪ್ರಸ್ತಾವನೆ:

2016-17ನೇ ಸಾಲಿನ ಆಯವ್ಯಯ ಭಾಷಣದ ಕ್ರಮ ಸಂಖ್ಯೆ:161ರಲ್ಲಿ 14 ಜಿಲ್ಲೆಗಳಲ್ಲಿರುವ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರಗಳಿಗೆ ನೀಡುವ ಸಹಾಯಧನದ ಸೌಲಭ್ಯವನ್ನು 16 ಜಿಲ್ಲೆಗಳಿಗೆ ವಿಸ್ತರಿಸುವುದು ಮತ್ತು ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು ರೂ. 28.00 ಲಕ್ಷದಿಂದ ರೂ. 36.00 ಲಕ್ಷಗಳಿಗೆ ದರ ಪರಿಷ್ಕರಣೆ ಮಾಡಲಾಗುವುದೆಂದು ಘೋಷಿಸಲಾಗಿದೆ. ರಾಜ್ಯದ ಶೇ.70ರಷ್ಟು ವಿಕಲಚೇತನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅವರುಗಳು ಶೈಕ್ಷಣಿಕ, ಸಾಮಾಜಿಕ ಆರ್ಥಿಕ ಹಾಗೂ ವೈದ್ಯಕೀಯ ಪುನರ್ವಸತಿ ಸೇವೆಗಳನ್ನು ಅವರುಗಳು ವಾಸಿಸುವ ಸ್ಥಳಗಳಿಗೆ ಹೋಗಿ ತಲುಪಿಸುವ, ಅಂಗವಿಕಲತೆಯನ್ನು ಪ್ರಾರಂಭದಲ್ಲಿಯೇ ಪತ್ತೆ ಹಚ್ಚಿ ಅದನ್ನು ತಡೆಗಟ್ಟುವ ಉದ್ದೇಶದಿಂದ ಜಿಲ್ಲಾ ಪುನರ್ ವಸತಿ ಕೇಂದ್ರಗಳನ್ನು ರೆಡ್ ಕ್ರಾಸ್ ಸಂಸ್ಥೆ/ವೈದ್ಯಕೀಯ ಮಹಾ ವಿಜ್ಞಾನ ಸಂಸ್ಥೆ ಅಥವಾ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ರಾಜ್ಯದ 14 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ವಾರದಲ್ಲಿ 03 ದಿನಗಳು ಕೇಂದ್ರದಲ್ಲಿರುವ ವಿವಿಧ ತಜ್ಞರ ತಂಡದವರು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಶಿಬಿರಗಳು, ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಪುನರ್ವಸತಿ ಕಲ್ಪಿಸಲು ಶ್ರಮಿಸುತ್ತಿದ್ದು, ತಜ್ಞರುಗಳಿಗೆ ನೀಡುತ್ತಿರುವ ಗೌರವಧನವು ಕಡಿಮೆಯಾಗಿರುವುದರಿಂದ ತಜ್ಞರುಗಳು ಕಾರ್ಯನಿರ್ವಹಿಸಲು ಮುಂದೆ ಬರುತ್ತಿಲ್ಲವಾದ ಕಾರಣ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕಷ್ಟವಾಗುತ್ತಿದ್ದು, ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ತಜ್ಞರುಗಳಿಗೆ ಹಾಗೂ ಕೇಂದ್ರ ನಿರ್ವಹಣೆಗಾಗಿ ಪ್ರತಿ ಜಿಲ್ಲೆಗೆ ನೀಡುತ್ತಿರುವ ವಾರ್ಷಿಕ ಅನುದಾನ ರೂ. 24,16,800/-ಗಳನ್ನು (ಅನಾವರ್ತಕ ವೆಚ್ಚ ಹೊರತುಪಡಿಸಿ) ರೂ. 36,00,000/-ಗಳಿಗೆ ಹೆಚ್ಚಿಸುವ ಅಗತ್ಯವಿದೆಯೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ, 14 ಜಿಲ್ಲೆಗಳಲ್ಲಿರುವ ಜಿಲ್ಲಾ ವಿಕಲಚೇತನರ ಪುನರ್ ವಸತಿ ಕೇಂದ್ರಗಳಿಗೆ ನೀಡುವ ಸಹಾಯಧನದ ಸೌಲಭ್ಯವನ್ನು 16 ಜಿಲ್ಲೆಗಳಿಗೆ ವಿಸ್ತರಿಸುವುದು ಮತ್ತು ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು ರೂ. 28.00 ಲಕ್ಷದಿಂದ ರೂ. 36.00 ಲಕ್ಷಗಳಿಗೆ ದರ ಪರಿಷ್ಕರಣೆ ಮಾಡುವ ಯೋಜನೆಯ ರೂಪುರೇಷೆ ಹಾಗೂ ಮಾರ್ಗಸೂಚಿಯನ್ನು ರೂಪಿಸಿ. ಪ್ರಸಕ್ತ ಸಾಲಿಗೆ ಜಿಲ್ಲಾ ಪುನರ್ವಸತಿ ಕೇಂದ್ರಗಳ ಅನುಷ್ಠಾನಕ್ಕೆ ಪ್ರತಿ ಕೇಂದ್ರಕ್ಕೆ ರೂ. 36.00 ಲಕ್ಷಗಳಂತೆ ಒಟ್ಟು ರೂ. 1080.00 ಲಕ್ಷಗಳ ಆಯವ್ಯಯದ ಅವಶ್ಯಕತೆಯಿದ್ದು, ಸದರಿ ಆಯವ್ಯಯವನ್ನು ಲೆಕ್ಕ ಶೀರ್ಷಿಕೆ: 2235-02-101-0-99 ಯೋಜನೆ ಉಪ ಲೆಕ್ಕ ಶೀರ್ಷಿಕೆ-100 ಧನಸಹಾಯ ಮತ್ತು ಪರಿಹಾರದಡಿಯಲ್ಲಿ ಒದಗಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ಮೇಲೆ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 113 ಪಿಹೆಚ್‌ಪಿ 2016, ಬೆಂಗಳೂರು, ದಿನಾಂಕ:16.05.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ 2016-17ನೇ ಸಾಲಿನಲ್ಲಿ ಪ್ರಸ್ತಾಪಿಸಿರುವ 14 ಜಿಲ್ಲೆಗಳಲ್ಲಿರುವ "ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರಗಳಿಗೆ" ನೀಡುವ ಸಹಾಯಧನದ ಸೌಲಭ್ಯವನ್ನು 16 ಜಿಲ್ಲೆಗಳಿಗೆ ವಿಸ್ತರಿಸುವುದು ಮತ್ತು ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು ರೂ. 28.00 ಲಕ್ಷದಿಂದ ರೂ. 36.00 ಲಕ್ಷಗಳಿಗೆ ದರ ಪರಿಷ್ಕರಣೆ ಮಾಡುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ: ಲೆಕ್ಕ ಶೀರ್ಷಿಕೆ:2235-02-101-0-99 ಯೋಜನೆ ಉಪ ಲೆಕ್ಕ ಶೀರ್ಷಿಕೆ-100 ಧನಸಹಾಯ ಮತ್ತು ಪರಿಹಾರದಡಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 278 ವೆಚ್ಚ-3 2016, ದಿ:27.04.2016 ಮತ್ತು ಪಿಡಿ 22 ಐಎಂಎಂ 2016, ದಿ:06.05.2016ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಲಕ್ಷ್ಮಿ) 16/5/2016
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
5. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ,ಅಭಯ ಸಂಕೀರ್ಣ,2ನೇ ಮಹಡಿ,ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ.ಬೆಂಗಳೂರು.
6. ಅಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(3 & 9), ವಿಧಾನ ಸೌಧ, ಬೆಂಗಳೂರು
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ ಒಡಿಜಿಸಿ/ ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಮಮಇ 113 ಪಿಹೆಚ್‌ಪಿ 2016, ದಿನಾಂಕ: 16-05-2016ಕ್ಕೆ ಅನುಬಂಧ**

2016-17ನೇ ಸಾಲಿನ ಆಯವ್ಯಯ ಭಾಷಣದ ಕ್ರಮ ಸಂಖ್ಯೆ:161ರಲ್ಲಿ 14 ಜಿಲ್ಲೆಗಳಲ್ಲಿರುವ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರಗಳಿಗೆ ನೀಡುವ ಸಹಾಯಧನದ ಸೌಲಭ್ಯವನ್ನು 16 ಜಿಲ್ಲೆಗಳಿಗೆ ವಿಸ್ತರಿಸುವುದು ಮತ್ತು ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು ರೂ. 28.00 ಲಕ್ಷದಿಂದ ರೂ. 36.00 ಲಕ್ಷಗಳಿಗೆ ದರ ಪರಿಷ್ಕರಣೆ ಮಾಡಲಾಗುವುದೆಂದು ಘೋಷಿಸಲಾಗಿದೆ. ರಾಜ್ಯದ ಶೇ.70ರಷ್ಟು ವಿಕಲಚೇತನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅವರುಗಳು ಶೈಕ್ಷಣಿಕ, ಸಾಮಾಜಿಕ ಆರ್ಥಿಕ ಹಾಗೂ ವೈದ್ಯಕೀಯ ಪುನರ್ವಸತಿ ಸೇವೆಗಳನ್ನು ಅವರುಗಳು ವಾಸಿಸುವ ಸ್ಥಳಗಳಿಗೆ ಹೋಗಿ ತಲುಪಿಸುವ, ಅಂಗವಿಕಲತೆಯನ್ನು ಪ್ರಾರಂಭದಲ್ಲಿಯೇ ಪತ್ತೆ ಹಚ್ಚಿ ಅದನ್ನು ತಡೆಗಟ್ಟುವ ಉದ್ದೇಶದಿಂದ ಜಿಲ್ಲಾ ಪುನರ್ ವಸತಿ ಕೇಂದ್ರಗಳನ್ನು ರೆಡ್ ಕ್ರಾಸ್ ಸಂಸ್ಥೆ/ವೈದ್ಯಕೀಯ ಮಹಾ ವಿಜ್ಞಾನ ಸಂಸ್ಥೆ ಅಥವಾ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ರಾಜ್ಯದ 14 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ವಾರದಲ್ಲಿ 03 ದಿನಗಳು ಕೇಂದ್ರದಲ್ಲಿರುವ ವಿವಿಧ ತಜ್ಞರ ತಂಡದವರು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಶಿಬಿರಗಳು, ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಪುನರ್ವಸತಿ ಕಲ್ಪಿಸಲು ಶ್ರಮಿಸುತ್ತಿದ್ದು, ತಜ್ಞರುಗಳಿಗೆ ನೀಡುತ್ತಿರುವ ಗೌರವಧನವು ಕಡಿಮೆಯಾಗಿರುವುದರಿಂದ ತಜ್ಞರುಗಳು ಕಾರ್ಯನಿರ್ವಹಿಸಲು ಮುಂದೆ ಬರುತ್ತಿಲ್ಲವಾದ ಕಾರಣ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕಷ್ಟವಾಗುತ್ತಿದ್ದು, ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ತಜ್ಞರುಗಳಿಗೆ ಹಾಗೂ ಕೇಂದ್ರ ನಿರ್ವಹಣೆಗಾಗಿ ಪ್ರತಿ ಜಿಲ್ಲೆಗೆ ನೀಡುತ್ತಿರುವ ವಾರ್ಷಿಕ ಅನುದಾನ ರೂ. 24,16,800/-ಗಳನ್ನು (ಅನಾವರ್ತಕ ವೆಚ್ಚ ಹೊರತುಪಡಿಸಿ) ರೂ. 36,00,000/-ಗಳಿಗೆ ಹೆಚ್ಚಿಸುವ ಅಗತ್ಯವಿರುವ ಹಿನ್ನೆಲೆಯಲ್ಲಿ 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ, 14 ಜಿಲ್ಲೆಗಳಲ್ಲಿರುವ ಜಿಲ್ಲಾ ವಿಕಲಚೇತನರ ಪುನರ್ ವಸತಿ ಕೇಂದ್ರಗಳಿಗೆ ನೀಡುವ ಸಹಾಯಧನದ ಸೌಲಭ್ಯವನ್ನು 16 ಜಿಲ್ಲೆಗಳಿಗೆ ವಿಸ್ತರಿಸುವುದು ಮತ್ತು ಪ್ರತಿ ಕೇಂದ್ರಕ್ಕೆ ನಿಗದಿಗೊಳಿಸಿರುವ ವಾರ್ಷಿಕ ಅನುದಾನವನ್ನು ರೂ. 28.00 ಲಕ್ಷಗಳಿಂದ ರೂ. 36.00 ಲಕ್ಷಗಳಿಗೆ ಹೆಚ್ಚಿಸಿ ಈ ಕೆಳಕಂಡ ವಿವರಗಳ ಕ್ರೋಢೀಕೃತ ಪಟ್ಟಿಯನ್ವಯ ಪರಿಷ್ಕರಿಸಲಾಗಿರುತ್ತದೆ.

ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳಿಗೆ ನೀಡುತ್ತಿರುವ ಅನುದಾನವನ್ನು ಪರಿಷ್ಕರಿಸುವ ಸಂಬಂಧ ಪರಿಷ್ಕರಣಾ ವಿವರಗಳನ್ನೊಳಗೊಂಡ ಕ್ರೋಢೀಕೃತ ಪಟ್ಟಿ

| ಕ್ರ. ಸಂ. | ಹುದ್ದೆಯ ಪದನಾಮ ಹಾಗೂ ವಿವರ | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ | ಹಾಲಿನಿಗದಿ ಪಡಿಸಿರುವ ಮಾಸಿಕ ಗೌರವಧನ | ವಾರ್ಷಿಕ ನೀಡುತ್ತಿರುವ ಗೌರವಧನದ ಮೊತ್ತ | ಪರಿಷ್ಕರಿಸ ಬೇಕಾದ ಗೌರವಧನ | ಪರಿಷ್ಕರಿಸಿದಲ್ಲಿ ಬೇಕಾಗುವ ಗೌರವಧನ ಮೊತ್ತ | |
|---|---|---|---|---|---|---|---|---|
| | | | | I ಆವರ್ತಕ ವೆಚ್ಚಗಳು | | | | |
| 01 | ಸೋಷಿಯಲ್ ಆಫೀಸರ್/ಸಮಾಜ ಸೇವಾ ಕಾರ್ಯಕರ್ತರು (ಯೂನಿಟ್ ಇನ್‌ಚಾರ್ಜ್) | MSW | 01 | 15,000.00 | 15,000 x 12 = 1,80,000 | 25,000.00 | 25,000 x 12 = 3,00,000 | |
| 02 | ಅಕೌಂಟೆಂಟ್ ಕಂ ಕ್ಲರ್ಕ್ | B.Com graduate | 01 | 8.000.00 | 8,000 x 12 = 96,000 | 12,000.00 | 12,000 x 12 = 1,44,000 | |
| 03 | ಸ್ಟೋರ್ ಕೀಪರ್ ಕಂ ಕ್ಲರ್ಕ್ | Any Degre | 01 | 6.000.00 | 6,000.00 x 12=72,000 | - | - | ಅಕೌಂಟೆಂಟ್ ಕಂ ಕ್ಲರ್ಕ್ ಮತ್ತು ಸ್ಟೋರ್ ಕೀಪರ್ ಎರಡೂ ಹುದ್ದೆಗಳನ್ನು ಒಬ್ಬರೇ ನಿರ್ವಹಿಸಬಹುದಾಗಿದೆ. |
| 04 | ಕಂಪ್ಯೂಟರ್ ಆಪರೇಟರ್ | PUC & Computer Knowledge | 01 | 5.000.00 | 5,000 x 12 =60,000 | 9,000.00 | 9,000 x 12 = 1,08,000 | |
| 05 | ಕಛೇರಿ ಸೇವಕ | SSLC | 01 | 4.000.00 | 4,000 x12 = 48,000 | 7,000.00 | 7,000 x 12 = 84,000 | |
| 06 | ಕೃತಕಾಂಗ ಜೋಡಣೆ (ಪಿ & ಒ) ಅಭಿಯಂತರರು | P & O Eng. Degree/Diploma with 2 to 5 yrs experience | 01 | 15,000.00 | 15,000 x 12 = 1,80.000 | 25,000.00 | 25,000 x 12 = 3,00,000 | |
| 07 | ಪ್ರಾಸ್ಥೆಟಿಸ್ಟ್ & ಆರ್ಥೋಟಿಸ್ಟ್ (ಪಿ & ಒ) | Diploma in P & O/ITI (Fitter) with 2 yrs experience in related field | 02 | 10,000.00 | 10,000x12x2 = 2,40,000 | 12,000.00 | 12,000x12x1 = 1,44,000 | ಒಂದು ಹುದ್ದೆಯಿಂದ ಕೆಲಸ ನಿರ್ವಹಿಸಬಹುದಾಗಿದೆ. |
| 08 | ಲೆದರ್ ವರ್ಕರ್/ಶೂ ಮೇಕರ್ | Certificate in Leather Work & Shoe Making with 2 yrs experience in related field | 01 | 5.000.00 | 5,000 x 12 =60,000 | 8,000.00 | 8,000 x 12 = 96,000 | |
| 09 | ಕ್ಲಿನಿಕಲ್ ಸೈಕಾಲಜಿಸ್ಟ್ ಹಾಲಿ ವಾರದಲ್ಲಿ 3 ದಿನಗಳು ಭೇಟಿ | M.A. in Clinical Psychology | 01 | 12,000.00 | 12,000 x 12 =1,44,000 | 25,000.00 | 25,000 x 12 = 3,00,000 | ಗೌರವಧನ ಹೆಚ್ಚಿಸುವುದರಿಂದ ಪೂರ್ಣಾವಧಿ ಮಾಡಬೇಕಿರುತ್ತದೆ. |
| 10 | ಸ್ಪೀಚ್ ಥೆರಪಿಸ್ಟ್ & ಆಡಿಯಾಲಜಿಸ್ಟ್ ಹಾಲಿ ವಾರದಲ್ಲಿ 3 ದಿನಗಳು ಭೇಟಿ | B.Sc in Speech & Audiology | 01 | 12,000.00 | 12,000 x 12 =1,44,000 | 25,000.00 | 25,000 x 12 = 3,00,000 | ಗೌರವಧನ ಹೆಚ್ಚಿಸುವುದರಿಂದ ಪೂರ್ಣಾವಧಿ ಮಾಡಬೇಕಿರುತ್ತದೆ. |

| ಕ್ರ ಸಂ. | ಹುದ್ದೆಯ ಪದನಾಮ ಹಾಗೂ ವಿವರ | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ | ಹಾಲಿನಿಗದಿ ಪಡಿಸಿರುವ ಮಾಸಿಕ ಗೌರವಧನ | ವಾರ್ಷಿಕ ನೀಡುತ್ತಿರುವ ಗೌರವಧನದ ಮೊತ್ತ | ಪರಿಷ್ಕರಿಸ ಬೇಕಾದ ಗೌರವಧನ | ಪರಿಷ್ಕರಿಸಿದಲ್ಲಿ ಬೇಕಾಗುವ ಗೌರವಧನ ಮೊತ್ತ | ಷರಾ |
|---|---|---|---|---|---|---|---|---|
| 11 | ಫಿಸಿಯೋ ಥೆರಪಿಸ್ಟ್/ಆಕ್ಯುಪೇಶನಲ್ ಥೆರಪಿಸ್ಟ್ ಹಾಲಿ ವಾರದಲ್ಲಿ 3 ದಿನಗಳು ಭೇಟಿ | Degree in Physio Therapy/Occupational Therapy | 01 | 12,000.00 | 12,000 x 12 =1,44,000 | 25,000.00 | 25,000 x 12 = 3,00,000 | ಗೌರವಧನ ಹೆಚ್ಚಿಸುವುದರಿಂದ ಮಾರ್ಪಾಡು ಮಾಡಬೇಕಿರುತ್ತದೆ. |
| 12 | ಮೊಬಿಲಿಟಿ ಇನ್ಸ್ಟ್ರಕ್ಟರ್ | Certificate Course in O & M | 01 | 5,000.00 | 5,000 x 12 = 60,000 | 8,000.00 | 8,000 x 12 = 96,000 | |
| 13 | ಇಯರ್ ಮೋಲ್ಡ್ ಟೆಕ್ನಿಷಿಯನ್ | Certificate Course in Ear Mould Technology | 01 | 5,000.00 | 5,000 x 12 =60,000 | 8,000.00 | 8,000 x 12 = 96,000 | |
| 14 | ಕೀಲು ಮತ್ತು ಮೂಳೆ ತಜ್ಞರು (ಪ್ರತಿ ಭೇಟಿಗೆ ರೂ.1000/-ನಂತೆ) ವಾರಕ್ಕೆ 2 ಭೇಟಿ | Post graduation or Diploma in Orthopaedics | 01 | 8,100.00 | 8,100 x 12 = 97,200 | 8,000.00 | 8,000 x 12=96,000 | |
| 15 | ಆಪ್ತಾಲ್ಮಾಲಜಿಸ್ಟ್ (ಪ್ರತಿ ಭೇಟಿಗೆ ರೂ.1000/-ನಂತೆ) ವಾರಕ್ಕೆ 2 ಭೇಟಿ | Post graduation or Diploma in Ophthalmology | 01 | 8,100.00 | 8,100 x 12 = 97,200 | 8,000.00 | 8,000 x 12=96,000 | |
| 16 | ಇ.ಎನ್.ಟಿ ಸ್ಪೆಷಲಿಸ್ಟ್ (ಪ್ರತಿ ಭೇಟಿಗೆ ರೂ.1000/-ನಂತೆ) ವಾರಕ್ಕೆ 2 ಭೇಟಿ | Post graduation or Diploma in ENT | 01 | 8,100.00 | 8,100 x 12 = 97,200 | 8,000.00 | 8,000 x 12=96,000 | |
| 17 | ಸೈಕಿಯಾಟ್ರಿಸ್ಟ್ (ಪ್ರತಿ ಭೇಟಿಗೆ ರೂ.1000/-ನಂತೆ) ವಾರಕ್ಕೆ 2 ಭೇಟಿ | Post graduation or Psychiatry Medicine | 01 | 8,100.00 | 8,100 x 12 = 97,200 | 8,000.00 | 8,000 x 12=96,000 | |
| 18 | ಕಟ್ಟಡ ನಿರ್ವಹಣೆ/ಬಾಡಿಗೆ | - | | 3,000.00 | 3,000 x 12 = 36,000 | 4,000.00 | 4,000 x 12 = 48,000 | |
| 19 | ಪ್ರಯಾಣ ವೆಚ್ಚಗಳು | - | | 10,000.00 | 10,000 x 12 = 1,20,000 | 12,000.00 | 12,000 x 12 = 1,44,000 | |
| 20 | ಕಛೇರಿ ವೆಚ್ಚಗಳು | - | | 4,000.00 | 4,000 x 12 = 48,000 | 4,000.00 | 4,000 x 12=48,000 | |
| 21 | ಲೇಖನ ಸಾಮಗ್ರಿ/ಪೋಸ್ಟೇಜ್ | - | | 4,000.00 | 4,000 x 12 = 48,000 | 4,000.00 | 4,000 x 12=48,000 | |
| 22 | ಇತರೆ ವೆಚ್ಚಗಳು | - | | 5,000.00 | 5,000 x 12 = 60,000 | 5,000.00 | 5,000 x 12=60,000 | |
| | ಒಟ್ಟು | | | 1,81,400/- | 24,16,800/- | 2,30,000/- | 30,00,000/- | |
| | II. ಅನಾವರ್ತಕ ವೆಚ್ಚಗಳು | | | | | | | |
| 01 | ಮೆಷಿನರಿ ಮತ್ತು ಎಕ್ವಿಪ್‌ಮೆಂಟ್ಸ್ | | | | | | 5,00,000.00 | |
| 02 | ಕಂಪ್ಯೂಟರ್/ಪರಿಕರಗಳು | | | | | | 50,000.00 | |
| 03 | ಪೀಠೋಪಕರಣಗಳು | | | | | | 50,000.00 | |
| | ಒಟ್ಟು | | | | | | 6,00,000.00 | |
| | I ಆವರ್ತಕ ವೆಚ್ಚಗಳು | | | | | | 30,00,000.00 | |
| | II ಅನಾವರ್ತಕ ವೆಚ್ಚಗಳು | | | | | | 6,00,000.00 | |
| | ಒಟ್ಟು ರೂ. | | | | | | 36,00,000.00 | |

ಈಗಾಗಲೇ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಪ್ರತಿ ಜಿಲ್ಲೆಗೆ ರೂ. 30.00 ಲಕ್ಷದಂತೆ 14 ಜಿಲ್ಲೆಗಳಿಗೆ ಬೇಕಾಗುವ ಅನುದಾನ (ಆವರ್ತಕ ವೆಚ್ಚ ಮಾತ್ರ) 420.00 ಲಕ್ಷಗಳು

ಉಳಿಕೆ 16 ಜಿಲ್ಲೆಗಳಿಗೆ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆಯನ್ನು ಅನುಷ್ಠಾನಗೊಳಿಸಲು ಬೇಕಾಗುವ ಅನುದಾನ (ಆವರ್ತಕ ಮತ್ತು ಅನಾವರ್ತಕ ವೆಚ್ಚ ಸೇರಿ) ಪ್ರತಿ ಜಿಲ್ಲೆಗೆ ರೂ. 36.00 ಲಕ್ಷದಂತೆ ಒಟ್ಟು ರೂ. 576.00 ಲಕ್ಷಗಳು

2016-17 ನೇ ಸಾಲಿಗೆ 30 ಜಿಲ್ಲೆಗಳಿಗೆ ಬೇಕಾಗುವ ಅನುದಾನ ರೂ. 996.00 ಲಕ್ಷಗಳು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಲಕ್ಷ್ಮಿ) 12/1/2017
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.